(3)

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ** : M/s Ottapidaram Wind Park Private Limited ಕಂಪನಿಯವರಿಗೆ ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳ ವಿವಿಧ ಗ್ರಾಮಗಳಲ್ಲಿ 100 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವ ಬಗ್ಗೆ.

**ಓದಲಾಗಿದೆ:** 1) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ರವರ ಪತ್ರ ಸಂಖ್ಯೆ:KREDL/08/OWPPL-100 MW/ Koppal & Raichur//F-22(2022)/506, ದಿನಾಂಕ:04.03.2022.

2) ದಿನಾಂಕ:09.03.2022ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿ.

**ಪ್ರಸ್ತಾವನೆ :-**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪತ್ರದನ್ವಯ ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್. ರವರು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ M/s Ottapidaram Wind Park Private Limited ರವರಿಗೆ ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳ ಲಿಂಗಸಗೂರು, ಮಸ್ಕಿ ಮತ್ತು ಕುಷ್ಟಗಿ ತಾಲ್ಲೂಕುಗಳ ಅದಾಪುರ, ಹೊನ್ನೂರ, ತುರುಡಗಿ, ಕಿಡದೂರ್, ಮಕ್ಕಾಪುರ್, ಜನ್ನಾಪುರ್, ಹಿರೆಯರದಿಹಾಲ, ಚಿಕ್ಕಯರದಿಹಾಲ್, ಬನ್ನಿಗೋಲ್, ಮರಲಿ, ತೆಲಿಕಟ್ಟೆ, ಕಲ್ಮಳ್ಳಿ, ತುರುಡಗಿ, ವ್ಯಾಕರನಾಲ, ಹೆಗ್ಗಾಪುರ, ಜಕ್ಕೇರಾಮದು, ತಿಮ್ಮಾಪುರ, ಕನ್ನಾಲ, ಹಡಗಲಿ, ನಾಲಗಾಪುರ, ಛತ್ರ, ಕಿಲ್ಲಾರಹಟ್ಟಿ ಮತ್ತು ಗರ್ಜನಾಲ ಗ್ರಾಮಗಳಲ್ಲಿ 100 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಪಡೆಯುವ ಕುರಿತು ವಿಸ್ತೃತ ಯೋಜನಾ ವರದಿಯನ್ನು ತಯಾರಿಸಿ, ಕ್ರೆಡಲ್‌ಗೆ ಸಲ್ಲಿಸಿರುವುದಾಗಿ ಹಾಗೂ ಸದರಿ ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್ತನ್ನು ಕೇಂದ್ರ ಸರ್ಕಾರದ Power Grid Corporation of India Limited (PGCIL) ನ ವಿದ್ಯುತ್ ಪ್ರಸರಣ ಜಾಲಕ್ಕೆ ಜೋಡಿಸಿ, ಹೊರ ರಾಜ್ಯಗಳಿಗೆ SECI ಬಿಡ್ಡಿಂಗ್ / ಮೂರನೇ ವ್ಯಕ್ತಿಗೆ Inter State Transmission System (ISTS) ಮುಖಾಂತರ ವಿದ್ಯುತ್ ಸರಬರಾಜು ಮಾಡುವ ವರ್ಗದಡಿ ಪ್ರತಿ ವಿಂಡ್ ಟರ್ಬೈನ್ ಗೆ 4 ಎಕರೆಯಂತೆ Footprint basis ಲೆಕ್ಕೀಕರಿಸಿ, ಜಮೀನುಗಳನ್ನು ಉಪಯೋಗಿಸುವುದು ಮತ್ತು ಪವನ ವಿದ್ಯುತ್ ಘಟಕಗಳ ಅಂತರವನ್ನು MNRE ಮಾರ್ಗಸೂಚಿಯಂತೆ, ಅಳವಡಿಸುವ ಷರತ್ತುಗಳನ್ನು ವಿಧಿಸಿ, ಹಂಚಿಕೆ ನೀಡುವಂತೆ ಕೋರಿರುವುದಾಗಿ ತಿಳಿಸಿರುತ್ತಾರೆ.

ಮುಂದುವರೆದು, M/s Ottapidaram Wind Park Private Limited ವಿಂಡ್ ಟರ್ಬೈನ್‌ಗಳನ್ನು ಅಳವಡಿಸಲು ಉದ್ದೇಶಿಸಿರುವ ಸ್ಥಳದ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಸದರಿಯವರು 50 ವಿಂಡ್ ಟರ್ಬೈನ್‌ಗಳಲ್ಲಿ ಅಳವಡಿಸಲು ಉದ್ದೇಶಿರುವ ಸ್ಥಳವು M/s Gale Green Urja Limited ರವರಿಗೆ ಸರ್ಕಾರದ ಪತ್ರ ಸಂಖ್ಯೆ:ಇಎನ್ 129 ಎನ್‌ಸಿಇ 2018,ದಿನಾಂಕ:24.12.2019ರನ್ವಯ 29.4 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಗೆ ತಾತ್ವಿಕ ಅನುಮೋದನೆ ನೀಡಲಾಗಿದ್ದು, ಸದರಿಯವರು ಯೋಜನೆಗೆ ಸಂಬಂಧಿಸಿದಂತೆ ನೀಡಲಾಗಿದ್ದ ಕಾಲಾವಧಿಯಲ್ಲಿ ಯಾವುದೇ ಪ್ರಗತಿಯನ್ನು ಸಾಧಿಸದ ಹಿನ್ನೆಲೆಯಲ್ಲಿ, ತಾತ್ವಿಕ ಅನುಮೋದನೆಯು ಮುಕ್ತಾಯಗೊಂಡಿರುವ ಸ್ಥಳದ ಮೇಲೆ ಬರುವುದಾಗಿ ತಿಳಿಸುತ್ತಾ, ಸದರಿ ಸ್ಥಳವು ಹಂಚಿಕೆಗೆ ಲಭ್ಯವಿರುವುದಾಗಿ ಕೆ.ಆರ್.ಇ.ಡಿ.ಎಲ್.ರವರು ಅಭಿಪ್ರಾಯಿಸಿರುತ್ತಾರೆ.

M/s Ottapidaram Wind Park Private Limited ಕಂಪನಿಯು ದಿನಾಂಕ: 03.01.2022ರಂದು ನೋಂದಾವಣೆಗೊಂಡಿದ್ದು, ಇದರ ನೋಂದಾಯಿತ ಕಚೇರಿಯು ತಮಿಳುನಾಡಿನ ಚೆನ್ನೈನಲ್ಲಿ ಸ್ಥಾಪಿತಗೊಂಡಿರುತ್ತದೆ. ಸದರಿ ಕಂಪನಿಯು M/s NTC Holdings Private Limited ರವರ ಅಂಗಸಂಸ್ಥೆಯಾಗಿರುತ್ತದೆ. M/s NTC Holdings Private Limited ರವರ ನೆಟ್‌ವರ್ತ್ ದಿನಾಂಕ:31.03.2020ರ ಅಂತ್ಯಕ್ಕೆ ರೂ.244.72 ಕೋಟಿಗಳಾಗಿರುತ್ತದೆ ಎಂದು ಚಾರ್ಟೆಡ್ ಅಕೌಂಟೆಂಟ್ ರವರು ದೃಢೀಕರಣ ಪತ್ರವನ್ನು ನೀಡಿರುವುದಾಗಿ ತಿಳಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಹಂಚಿಕೆ ಸಮಿತಿ ಸಭೆಯಲ್ಲಿ M/s Ottapidaram Wind Park Private Limited ರವರು ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳ, ಲಿಂಗಸಗೂರು, ಮಸ್ಕಿ ಮತ್ತು ಕುಷ್ಟಗಿ ತಾಲ್ಲೂಕುಗಳ ವಿವಿಧ ಗ್ರಾಮಗಳಲ್ಲಿ ISTS ವರ್ಗದಡಿಯಲ್ಲಿ ಹಂಚಿಕೆ ನೀಡುವಂತೆ ಕೋರಿರುವ

....2

1325
30/5/22
KREDL
A (Tech) KREDL
673
01.06.22

100 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಸ್ಥಳವು ಖಾಸಗಿ ಜಮೀನಾಗಿರುತ್ತದೆ. ಸದರಿಯವರು 2 ಮೆ.ವ್ಯಾ ಸಾಮರ್ಥ್ಯದ 50 ವಿಂಡ್ ಟರ್ಬೈನ್‌ಗಳನ್ನು ಅಳವಡಿಸುತ್ತಿದ್ದು, ಅಳವಡಿಸುವ Wind Turbine ಗಳಿಗೆ ಅಕ್ಷಾಂಶ ಮತ್ತು ರೇಖಾಂಶಗಳನ್ನು ನೀಡಿರುತ್ತಾರೆ. ಆದುದರಿಂದ ಸದರಿ ಅಭಿವೃದ್ಧಿದಾರರು ಅಳವಡಿಸುವ ಪ್ರತಿ ಟರ್ಬೈನ್ ನ footprint ಜಾಗಕ್ಕೆ 4 ಎಕರೆಗಳಂತೆ ಒಟ್ಟು 200 ಎಕರೆ (50 x 4 =200) ಜಮೀನನ್ನು ಮಾತ್ರ ಪವನ ವಿದ್ಯುತ್ ಯೋಜನೆಯನ್ನು ಅನುಷ್ಠಾನಗೊಳಿಸಲು Toposheet No:57 A/5 ರಲ್ಲಿ ಉಪಯೋಗಿಸಿಕೊಳ್ಳಬಹುದಾಗಿದೆ ಹಾಗೂ ಸದರಿಯವರು ಅಳವಡಿಸುವ ಪವನ ವಿದ್ಯುತ್ ಘಟಕಗಳ ಅಂತರವನ್ನು MNRE ಸುತ್ತೋಲೆ/ಮಾರ್ಗಸೂಚಿಯಂತೆ (Micrositing Guidelines) ಅಳವಡಿಸ ಬೇಕಾಗಿರುತ್ತದೆ. ಆದ ಕಾರಣ ಯೋಜನೆಗೆ ಬೇಕಾಗುವ ಜಮೀನನ್ನು ಪಡೆಯುವುದು ಮತ್ತು PGCIL ನಿಂದ Evacuation ಅನುಮತಿ ಪತ್ರ ಹಾಗೂ LTA approval ಪಡೆಯುವುದು ಅಭಿವೃದ್ಧಿದಾರರ ಜವಾಬ್ದಾರಿಯಾಗಿರುತ್ತದೆ ಎಂದು ತಿಳಿಸುತ್ತಾ, ಈ ಕೆಳಕಂಡ ಷರತ್ತುಗಳಿಗೊಳಪಟ್ಟು M/s Ottapidaram Wind Park Private Limited ರವರಿಗೆ ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳ ಲಿಂಗಸಗೂರು, ಮಸ್ಕಿ ಮತ್ತು ಕುಷ್ಟಗಿ ತಾಲ್ಲೂಕುಗಳ ವಿವಿಧ ಗ್ರಾಮಗಳಲ್ಲಿ ISTS ವರ್ಗದಡಿಯಲ್ಲಿ 100 ಮೆ.ವ್ಯಾ ಸಾಮರ್ಥ್ಯದ ಪವನ ಯೋಜನೆಯನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ಹಂಚಿಕೆ ನೀಡಲು ಸಮಿತಿಯು ಸರ್ವಾನುಮತದಿಂದ ಶಿಫಾರಸ್ಸು ಮಾಡಿರುತ್ತದೆ.

1) ಸದರಿ ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್ ನ್ನು ಕೇಂದ್ರ ಸರ್ಕಾರದ Power Grid Corporation of India Limited (PGCIL) ನ ವಿದ್ಯುತ್ ಪ್ರಸರಣ ಜಾಲಕ್ಕೆ ಜೋಡಿಸಿ, ಹೊರ ರಾಜ್ಯಗಳಿಗೆ SECI ಬಿಡ್ಡಿಂಗ್ / ಮೂರನೇ ವ್ಯಕ್ತಿಗೆ Inter State Transmission System (ISTS) ಮುಖಾಂತರ ವಿದ್ಯುತ್ ಸರಬರಾಜು ಮಾಡಲು
2) ಈಗಾಗಲೇ ಇತರೆ ಅಭಿವೃದ್ಧಿದಾರರುಗಳು ಹಂಚಿಕೆ/ತಾತ್ವಿಕ ಅನುಮೋದನೆಯನ್ನು ಪಡೆದಿರುವ ಪ್ರದೇಶದಲ್ಲಿ ಪ್ರಸ್ತಾಪಿತ ಯೋಜನೆಯು Overlap ಆಗಿದ್ದಲ್ಲಿ, ಸದರಿಯವರು ಕೋರಿರುವ ಪ್ರಸ್ತಾವನೆಯ ಹಂಚಿಕೆ/ತಾತ್ವಿಕ ಅನುಮೋದನೆಯು ರದ್ದುಗೊಳ್ಳುತ್ತದೆ.

**Tentative Latitude and Longitude of WTG Locations for 100 MW (50 Nos of WTG x 2000 kW) capacity Wind Power Project of M/s Ottapidaram Wind Park Private Limited**

| Sl. No | WTG No. | Latitude (N) | | | Longitude (E) | | | Village Name | Tentative Survey No. | Taluk | District |
|---|---|---|---|---|---|---|---|---|---|---|---|
| | | Deg. | Min. | Sec. | Deg. | Min. | Sec. | | | | |
| 1 | WTG - 01 | 15 | 58 | 58.8 | 76 | 21 | 5.4 | Adhapura | 25 | Lingasugur | Raichur |
| 2 | WTG - 02 | 15 | 58 | 32.6 | 76 | 21 | 4.8 | Adhapura | 30/2 | Lingasugur | Raichur |
| 3 | WTG - 03 | 15 | 58 | 5.1 | 76 | 21 | 3.2 | Adhapura | 61 | Lingasugur | Raichur |
| 4 | WTG - 04 | 15 | 57 | 32.6 | 76 | 21 | 9.3 | Adhapura | 75 | Lingasugur | Raichur |
| 5 | WTG - 05 | 15 | 56 | 46.5 | 76 | 20 | 40.5 | Honnura | 47 | Lingasugur | Raichur |
| 6 | WTG - 06 | 15 | 56 | 13.5 | 76 | 20 | 39.7 | Honnura | 37 | Lingasugur | Raichur |
| 7 | WTG - 07 | 15 | 55 | 41.1 | 76 | 20 | 39.5 | Thurudagi | 18 | Lingasugur | Raichur |
| 8 | WTG - 08 | 15 | 55 | 7.4 | 76 | 20 | 42.4 | Thurudagi | 50 | Lingasugur | Raichur |
| 9 | WTG - 09 | 15 | 54 | 4.8 | 76 | 21 | 43.8 | Kidadhura | 91 | Kushtagi | Koppal |
| 10 | WTG - 10 | 15 | 53 | 45.9 | 76 | 22 | 31.5 | Kallamalli | 121 | Kushtagi | Koppal |
| 11 | WTG - 11 | 15 | 54 | 12.1 | 76 | 22 | 26.2 | Kidadhura | 22 | Kushtagi | Koppal |

...3